**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 2631/2022**

ಫಿರ್ಯಾದಿ : ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿತರುಃ

1. ಮಲ್ಲಯ್ಯ ಶಿವಪುತ್ರಯ್ಯಾ ಪಟದಯ್ಯನವರ @ ಮಲ್ಲೇಶಿ ಶಿವಪುತ್ರಯ್ಯ ವಯಾಃ 45 ವರ್ಷ, ಉಃ ಕಾರ್ಮಿಕ, ಸಾಃ ಸಂಗೊಳ್ಳಿ ರಾಯಣ್ಣ ನಗರ, ಧಾರವಾಡ
2. ಹೇಮಾ ಕೋಂ ಮಲ್ಲಯ್ಯ ಪಟದಯ್ಯನವರ, ವಯಾಃ 32 ವರ್ಷ, ಉಃ ಮನೆಕೆಲಸ, ಸಾಃ ಸಂಗೊಳ್ಳಿ ರಾಯಣ್ಣ ನಗರ, ಧಾರವಾಡ
3. ಮಹಾದೇವಿ ಕೋಂ ಶಿವಪುತ್ರಯ್ಯಾ ಪಟದಯ್ಯನವರ ವಯಾಃ 60 ವರ್ಷ, ಉಃ ಮನೆ ಕೆಲಸ, ಸಾಃ ಸಂಗೊಳ್ಳಿ ರಾಯಣ್ಣ ನಗರ, ಧಾರವಾಡ

## ದೋಷಾರೋಪಣೆ

ಶ್ರೀ ಮಹೇಶ ಚಂದ್ರಕಾಂತ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ ಧಾರವಾಡ ಆದ ನಾನು ಈ ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಇಡುವ ದೋಷಾರೋಪಣೆಗಳೆಂದರೆಃ-

ಮೊದಲನೆಯದಾಗಿ, ದಿನಾಂಕ 31.05.2022 ರಂದು ಮುಂಜಾನೆ 11-30 ಗಂಟೆಯ ಸುಮಾರಿಗೆ ಧಾರವಾಡ ವಿದ್ಯಾಗಿರಿ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಸಂಗೊಳ್ಳಿ ರಾಯಣ್ಣ ನಗರದ ಗಣಪತಿ ಗುಡಿ ಹತ್ತಿರ ಕಸಬರಗಿ ಪ್ಯಾಕ್ಟರಿ ರೋಡ ನಲ್ಲಿರುವ ಫಿರ್ಯಾದಿ ಹಾಗೂ ಆರೋಪಿತರ ಮನೆಯ ಪಕ್ಕದ ಜಾಗದಲ್ಲಿ, ಆರೋಪಿತರಾದ ನೀವು ನಿಮ್ಮ ಸಮಾನ ಮನಸ್ಸಿನಿಂದ, ಪಿರ್ಯಾದಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿ ಅವಮಾನಪಡಿಸಿ ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ **504** ಸಹ ಕಲಂ **34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಎರಡನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನ ಮನಸ್ಸಿನಿಂದ, ಪಿರ್ಯಾದಿಯು ಧರಿಸಿದ ರುದ್ರಾಕ್ಷಿ ಗುಂಡಗಡಗಿ ದಾರವನ್ನು ಜಗ್ಗಾಡಿ, ಫಿರ್ಯಾದಿಯ ಕೊರಳಿಗೆ ಗಾಯ ಪಡಿಸಿ, ತಮ್ಮ ತಮ್ಮ

ಕೈಗಳಿಂದ ಹೊಡಿ ಬಡಿ ಮಾಡಿ , ನೋವನ್ನುಂಟು ಮಾಡಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ **323** ಸಹ ಕಲಂ **34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತಿರಿ?

ಮೂರನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನ ಮನಸ್ಸಿನಿಂದ, ಪಿರ್ಯಾದಿಗೆ 1 ನೇ ಆರೋಪಿಯು ಕೈ ಹಿಡಿ ಗಾತ್ರದ ಕಲ್ಲಿನಿಂದ ಹೊಡೆದು ನೋವನ್ನುಂಟುಮಾಡಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ **324** ಸಹ ಕಲಂ **34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತಿರಿ?

ಕೊನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನ ಮನಸ್ಸಿನಿಂದ ಪಿರ್ಯಾದಿಗೆ ಪೊಲೀಸ್ ಠಾಣೆಗೆ ಹೋಗಿ ಕಂಪ್ಲೆಂಟ್ ಕೊಟ್ಟರೆ ಕೊಂದು ಬಿಡುತ್ತೇವೆ ಎಂದು ಜೀವ ಬೆದರಿಕೆ ಹಾಕಿ ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ **506** ಸಹ ಕಲಂ **34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಆದ್ದರಿಂದ ಈ ಮೇಲೆ ಹೇಳಿದ ದೋಷಾರೋಪಣೆಯ ಬಗ್ಗೆ ಆರೋಪಿಯಾದ ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡಬೇಕಾಗಿ ನಿರ್ದೇಶಿಸುತ್ತೇನೆ.

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಾದ ಕನ್ನಡದಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ನೀಡಿರುವ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು.)

ಧಾರವಾಡ
ದಿನಾಂಕಃ **21.01.2023**

**(ಮಹೇಶ ಚಂದ್ರಕಾಂತ)**
**3 ನೇ ಹೆ ಹಿ ದಿ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಧಾರವಾಡ.**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 2631/2022**

ಫಿರ್ಯಾದಿ : ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿತರು 1. ಮಲ್ಲಯ್ಯ ಶಿವಪುತ್ರ ಯ್ಯಾಪಟದಯ್ಯನವರ

**:ಆಪಾದನೆ:**

ಪ್ರಶ್ನೆ : ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರ :

ಪ್ರಶ್ನೆ : ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುತ್ತೀರಾ?

ಉತ್ತರ :

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕಃ 21.01.2023

3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ
ಸಿಜೆಎಂ., ಧಾರವಾಡ.

ಆರೋಪಿತನ ಸಹಿ

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 2631/2022**

ಫಿರ್ಯಾದಿ : ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿತರು 2. ಹೇಮಾ ಕೋಂ ಮಲ್ಲಯ್ಯ ಪಟದಯ್ಯನವರ

:ಆಪಾದನೆ:

ಪ್ರಶ್ನೆ : ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರ :

ಪ್ರಶ್ನೆ : ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುತ್ತೀರಾ?

ಉತ್ತರ :

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕಃ 21.01.2023

3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ
ಸಿಜೆಎಂ., ಧಾರವಾಡ.

ಆರೋಪಿತನ ಸಹಿ

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 2631/2022**

ಫಿರ್ಯಾದಿ : ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿತರು 3. ಮಹಾದೇವಿ ಕೋಂ ಶಿವಪುತ್ರ ಯ್ಯಾಪಟದಯ್ಯನವರ

:ಆಪಾದನೆ:

ಪ್ರಶ್ನೆ : ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರ :

ಪ್ರಶ್ನೆ : ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುತ್ತೀರಾ?

ಉತ್ತರ :

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕಃ 21.01.2023

3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ
ಸಿಜೆಎಂ., ಧಾರವಾಡ.

ಆರೋಪಿತನ ಸಹಿ